**OS.No.7/2021**
**ಡಿ ಡಬ್ಲ್ಯೂ:1**

**ದಿಃ 28.02.2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ವಾದಿ ಪರ ಶ್ರೀ ಎಂ ಹೆಚ್ ಜೆ ವಕೀಲರಿಂದ**

ದಿನಾಂಕ 22.03.2019 ರಲ್ಲಿ ನನ್ನ ತಂದೆ ಮರಣ ಹೊಂದಿರುತ್ತಾರೆ. ನನ್ನ ತಂದೆ ಮತ್ತು ನನ್ನ ನಡುವೆ ಯಾವತ್ತು ವೈಮನಸ್ಸು ಬಂದಿರಲಿಲ್ಲ. ನನ್ನ ಮದುವೆಯ ನಂತರ ನಾನು ಮತ್ತು ನನ್ನ ಅಣ್ಣ ಬೇರೆ ಬೇರೆಯಾಗಿರುತ್ತೇವೆ. ನಾವು ಬೇರೆ ಬೇರೆ ಆದ ನಂತರ ನನ್ನ ತಂದೆ ನನ್ನ ಅಣ್ಣನ ಜೊತೆ ವಾಸವಿದ್ದರು. ನನ್ನ ತಂದೆ ನಾವು ಬೇರೆ ಆದ ನಂತರ ನನ್ನ ಜೊತೆ ಯಾವತ್ತು ವಾಸವಿಲ್ಲ. ನನ್ನ ಅಣ್ಣಂದಿರು ನನಗೆ ನ್ಯಾಯಯುತವಾಗಿ ಪಾಲು ಕೊಡದೇ ಇರುವ ಕಾರಣ ನಾನು ನ್ಯಾಯಾಲಯಕ್ಕೆ ಪಾಲು ವಿಭಾಗ ದಾವೆ ಸಲ್ಲಿಸಿದ್ದೆ. ಪಾಲು ವಿಭಾಗ ದಾವೆಯಲ್ಲಿ ಅವರವರ ಹೆಸರಿಗೆ ಬಂದ ಆಸ್ತಿಗಳು ಅವರವರ ಸ್ವಂತ ಆಸ್ತಿಗಳು ಎಂದರೆ ಸರಿ. ಅವರವರ ಹಿಸ್ಸೆಗೆ ಬಂದ ಆಸ್ತಿಗಳನ್ನು ಅವರು ತಮಗೆ ಇಚ್ಚೆ ಬಂದವರಿಗೆ ಖರೀದಿಪತ್ರ, ದಾನ ಪತ್ರ ಮತ್ತು ಮರಣ ಶಾಸನ ಮಾಡಬಹುದು ಎಂದರೆ ಸರಿ. ಪಾಲು ವಿಭಾಗ ದಾವೆಯಲ್ಲಿ ಆದ ಡಿಕ್ರಿಯು ಸರಿ ಇಲ್ಲ ಎಂದು ನಾನು ಯಾವುದೇ ನ್ಯಾಯಾಲಯದಲ್ಲಿ ಪ್ರಶ್ನೆ ಮಾಡಿಲ್ಲ ಎಂದರೆ ಸರಿ. ದಾವೆಯು ಡಿಕ್ರಿಯಾದ ಸಮಯದಲ್ಲಿ ನನ್ನ ತಂದೆ ಆರೋಗ್ಯವಾಗಿದ್ದರು ಎಂದರೆ ಸರಿಯಲ್ಲ. ದಾವೆಯು ಡಿಕ್ರಿಯಾದ ಸಮಯದಲ್ಲಿ ನನ್ನ ತಂದೆ ಆರೋಗ್ಯವಾಗಿ ಇರಲಿಲ್ಲ ಎಂದು ತೋರಿಸಲು ನನ್ನ ಬಳಿ ದಾಖಲೆಗಳು ಇರುತ್ತವೆ. 1995 ರಲ್ಲಿ ನನ್ನ ತಂದೆಗೆ ಪಾರ್ಶ್ವವಾಯು ಆಗಿತ್ತು ಎಂದು ನನ್ನ ಅಣ್ಣ ಹಳೆಯ ದಾವೆಯಲ್ಲಿ ಹೇಳಿದ್ದರಿಂದ ಆ ಹೇಳಿಕೆ ಇರುತ್ತದೆ ಅದನ್ನು ಬಿಟ್ಟರೆ ಬೇರೆ ದಾಖಲೆಗಳು ಇಲ್ಲ. ಹಳೆಯ ದಾವೆಯಲ್ಲಿ ರಾಜೀ ಮಾಡಿಕೊಳ್ಳುವಾಗ ನಾವೆಲ್ಲರೂ ಒಪ್ಪಿಕೊಂಡೇ ರಾಜಿ ಮಾಡಿಕೊಂಡಿರುತ್ತೇವೆ. ನನ್ನ ತಂದೆಗೆ ಮರಣ ಶಾಸನ ಬರೆಯಲು ಹಕ್ಕು ಇರುತ್ತದೆ. ಆದರೆ ಈ ದಾವೆಯಲ್ಲಿ ಹಾಜರುಪಡಿಸಿದ ಮರಣ ಶಾಸನ ನನ್ನ ತಂದೆ ಮಾಡಿದ ಮರಣ ಶಾಸನ ಇರುವುದಿಲ್ಲ. ಮರಣ ಶಾಸನ ಆಗಿಲ್ಲ ಎನ್ನುವುದು ನನ್ನ ಭಾವನೆ ಇರುತ್ತದೆ.

ನನ್ನ ತಂದೆಗೆ ನಾವು 5 ಜನ ಮಕ್ಕಳು. ಅದರಲ್ಲಿ ಇಬ್ಬರು ಗಂಡು ಮಕ್ಕಳು

ಮೂರು ಜನ ಹೆಣ್ಣು ಮಕ್ಕಳು ಇರುತ್ತಾರೆ. ಮೂರು ಜನ ಹೆಣ್ಣು ಮಕ್ಕಳ ಮದುವೆಯಾಗಿದ್ದು ಗಂಡನ ಮನೆಯಲ್ಲಿ ಇದ್ದಾರೆ ಎಂದರೆ ಸರಿ. ನನ್ನ ಮೂರು ಜನ ಸಹೋದರಿಯರ ಮದುವೆ ಖರ್ಚು ಹಾಗೂ ಇನ್ನಿತರೆ ಖರ್ಚನ್ನು ನನ್ನ ತಂದೆಯೇ ನೋಡಿಕೊಂಡಿರುತ್ತಾರೆ ಎಂದರೆ ಸರಿ. ನನ್ನ ತಂದೆ ಅವರ ಹಿಸ್ಸೆಗೆ ಬಂದ ಯಾವುದೇ ಆಸ್ತಿಯನ್ನು ಮಾರಾಟ ಮಾಡಿಲ್ಲ. ಈ ದಾವೆಯಲ್ಲಿ ವಾದಿಯರು ಏನೆಲ್ಲಾ ದಾಖಲೆಗಳನ್ನು ಹಾಜರುಪಡಿಸಿದ್ದಾರೆ ಎನ್ನುವ ಬಗ್ಗೆ ನನಗೆ ಮಾಹಿತಿ ಇರುತ್ತದೆ. ವಾದಿಯರು ನೋಂದಾಯಿತ ಮರಣ ದಾಖಲೆಯನ್ನು ಹಾಜರುಪಡಿಸಿದ್ದಾರೆ ಎಂದರೆ ಸಾಕ್ಷಿಯು ನನಗೆ ನ್ಯಾಯಾಲಯದಿಂದ ಸಮನ್ಸ್ ಬಂದಾಗ ಮರಣ ಶಾಸನ ನೋಡಿರುತ್ತೇನೆ ಎಂದು ನುಡಿಯುತ್ತಾರೆ. ನಾನು ನಿಪಿ.19 ರಂತೆ ತಹಶೀಲ್ದಾರ್ ಚನ್ನಗಿರಿರವರಿಗೆ ತಕರಾರು ಕೊಟ್ಟಾಗ ನನಗೆ ಮರಣ ಶಾಸನದ ಬಗ್ಗೆ ಸ್ವಲ್ಪ ಮಾಹಿತಿ ಇತ್ತು. ನಾನು ದಿನಾಂಕ 30.11.2020 ರಂದು ತಹಶೀಲ್ದಾರ್ ರವರಿಗೆ ಸದರಿ ತಕರಾರನ್ನು ಕೊಟ್ಟಿದ್ದೆ. ತಕರಾರು ಕೊಟ್ಟ ನಂತರ ನಾನು ಸದರಿ ಮರಣ ಶಾಸನವನ್ನು ರದ್ದುಪಡಿಸುವಂತೆ ಯಾವುದೇ ನ್ಯಾಯಾಲಯದಲ್ಲಿ ದಾವೆ ದಾಖಲಿಸಿಲ್ಲ. ಸಾಕ್ಷಿ ಮುಂದುವರೆದು ನಂತರ ನನ್ನ ಅಣ್ಣನೇ ನ್ಯಾಯಾಲಯಕ್ಕೆ ದಾವೆ ದಾಖಲಿಸಿದ್ದಾರೆ ಎಂದು ನುಡಿಯುತ್ತಾರೆ. ನಾನು ನನ್ನ ಅಣ್ಣ ದಾವೆ ಸಲ್ಲಿಸಿದ ನಂತರವು ಸಹ ಇಲ್ಲಿಯವರೆಗೂ ಸದರಿ ಮರಣ ಶಾಸನವನ್ನು ರದ್ದುಪಡಿಸುವಂತೆ ದಾವೆ ದಾಖಲಿಸಿಲ್ಲ ಎಂದರೆ ಸರಿ. ನಿಪಿ.21 ರಲ್ಲಿರುವ ಹೆಬ್ಬಟ್ಟಿನ ಗುರುತು ಅಲ್ಲಿ ನನ್ನ ತಂದೆಯ ಹೆಸರು ಇರುವ ಕಾರಣ ಅದು ನನ್ನ ತಂದೆಯ ಹೆಬ್ಬಟ್ಟು ಇರಬಹುದು ಎಂದು ಹೇಳುತ್ತಿದ್ದೇನೆ. ನಿಪಿ.21 ರಲ್ಲಿರುವ ಭಾವಚಿತ್ರವು ನನ್ನ ತಂದೆಯ ಪೋಟೋ ಇರುತ್ತದೆ. ಅದರಲ್ಲಿ ಇರುವ ಹೆಬ್ಬಟ್ಟಿನ ಸಹಿ ನನ್ನ ತಂದೆಯ ಹೆಬ್ಬಟ್ಟಿನ ಸಹಿ ಇರಬಹುದು. ನನ್ನ ತಂದೆ ಹೆಬ್ಬಟ್ಟಿನ ಸಹಿ ಮಾಡಿದ ದಾಖಲೆಗಳು ಇದ್ದರೆ ನಾನು ನ್ಯಾಯಾಲಯಕ್ಕೆ ಹಾಜರುಪಡಿಸುತ್ತೇನೆ. ಒಂದು ದಾಖಲೆ ನೋಂದಾಯಿತ ದಾಖಲೆ ಆಗಬೇಕಾದರೆ ಆ ವ್ಯಕ್ತಿಯ ಪೋಟೋ ಮತ್ತು ಸಹಿಗಳನ್ನು ಪಡೆಯುತ್ತಾರೆ ಎಂದರೆ ಸರಿ. ನಿಪಿ.21 ರಲ್ಲಿ ಬರೆದಿರುವ ಸಂಗತಿಗಳ ಬಗ್ಗೆ ನನಗೆ ಮಾಹಿತಿ ಇರುತ್ತದೆ. ಯಾವುದಾದರೂ ಒಂದು ದಾಖಲೆ ನೋಂದಣಿ ಆಗಬೇಕಾದರೆ ಆ

ವ್ಯಕ್ತಿ ಕೊಟ್ಟ ಮಾಹಿತಿ ಮೇರೆಗೆ ತಯಾರಾಗಿ ನೋಂದಣಿ ಆಗುತ್ತದೆ ಎಂದರೆ ಸರಿ. ನಿಪಿ.21 ರಲ್ಲಿರುವ ಹೆಬ್ಬಟ್ಟಿನ ಸಹಿ ನನ್ನ ತಂದೆಯ ಹೆಬ್ಬಟ್ಟಿನ ಸಹಿ ಇರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ. ನಿಪಿ.21 ರಲ್ಲಿ ಯಾವೆಲ್ಲಾ ಆಸ್ತಿಗಳನ್ನು ಸೇರಿಸಿದ್ದಾರೆ ಎನ್ನುವ ಬಗ್ಗೆ ನನಗೆ ಮಾಹಿತಿ ಇದೆ. ನನ್ನ ತಂದೆ ಮರಣ ಶಾಸನ ಮಾಡುವ ಪೂರ್ವದಲ್ಲಿ ಕೆಲವು ಆಸ್ತಿಗಳನ್ನು ಮಾರಾಟ ಮಾಡಿದ್ದರು ಎಂದರೆ ಸರಿಯಲ್ಲ. ನಾನು ಈ ದಾವೆಯಲ್ಲಿ ಪ್ರತಿವಾದ ಪತ್ರ ಸಲ್ಲಿಸುವ ಕಾಲಕ್ಕೆ ನನ್ನ ತಂದೆಯ ಹೆಸರಿನಲ್ಲಿ ಇರುವ ಹಕ್ಕು ದಾಖಲೆಗಳನ್ನು ನಾನು ಪರಿಶೀಲನೆ ಮಾಡಿರುತ್ತೇನೆ. ನಾನು ಪ್ರತಿವಾದ ಪತ್ರ ಸಲ್ಲಿಸುವ ಕಾಲಕ್ಕೆ ನನ್ನ ತಂದೆಯ ಹೆಸರಿನಲ್ಲಿ ಹಕ್ಕು ದಾಖಲೆಗಳು ಇದ್ದರೆ ಅದನ್ನು ನನ್ನ ಪ್ರತಿವಾದ ಪತ್ರದಲ್ಲಿ ಬರೆಸುತ್ತಿದ್ದೆ ಎಂದರೆ ಸಾಕ್ಷಿಯು ನಾನು ಆ ದಾಖಲೆಗಳನ್ನು ಹಾಜರುಪಡಿಸಿದ್ದೇನೆ ಎಂದು ನುಡಿಯುತ್ತಾರೆ. ನನ್ನ ತಂದೆಯವರು ಯಾವುದೇ ಮರಣ ಶಾಸನ ಮಾಡಿಲ್ಲ. ನಿಪಿ.22 ರಲ್ಲಿ ಇರುವ ಭಾವಚಿತ್ರ ನನ್ನ ತಂದೆಯದ್ದು ಇರುತ್ತದೆ. ನಿಪಿ.22 ರಲ್ಲಿ ಇರುವ ಹೆಬ್ಬಟ್ಟಿನ ಸಹಿ ನನ್ನ ತಂದೆಯದ್ದು ಇರಬಹುದು. ನಿಪಿ.22 ದಾಖಲೆಯು ದಿನಾಂಕ 07.01.2019 ರಲ್ಲಿ ನೋಂದಣಿಯಾಗಿರುತ್ತದೆ ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿಯುತ್ತಾರೆ.

ನನ್ನ ಸಾಕ್ಷಿ ಪ್ರಮಾಣ ಪತ್ರಕ್ಕೆ ನಾನೇ ಖುದ್ದು ಮಾಹಿತಿ ನೀಡಿರುತ್ತೇನೆ. ನನ್ನ ತಂದೆಗೆ ಪಾರ್ಶ್ವವಾಯು ಮತ್ತು ರಕ್ತದೊತ್ತಡ ಕಾಯಿಲೆ ಇತ್ತು ಎಂದು ಬರೆಸಿರುವುದಕ್ಕೆ ದಾಖಲೆ ಇಲ್ಲ ಆದರೆ ಹಳೆ ದಾವೆಯಲ್ಲಿ ನನ್ನ ಅಣ್ಣ ಹೇಳಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆಗೆ ಪಾರ್ಶ್ವವಾಯು ಆದ ಬಗ್ಗೆ ನಾನು ನನ್ನ ಅಣ್ಣ ಮತ್ತು ನನ್ನ ಸಹೋದರಿಯರು ಸೇರಿ ದಾವಣಗೆರೆಯ ನವೋದಯ ಆಸ್ಪತ್ರೆಗೆ ಸೇರಿಸಿದ್ದೆವು. ಆಸ್ಪತ್ರೆಗೆ ದಾಖಲಾದರೆ ಆ ಬಗ್ಗೆ ಆಸ್ಪತ್ರೆಯವರು ದಾಖಲೆಗಳನ್ನು ನಿರ್ವಹಣೆ ಮಾಡುತ್ತಾರೆ ಎಂದರೆ ಸರಿ. ಆ ದಾಖಲೆಗಳಲ್ಲಿ ಆಸ್ಪತ್ರೆಗೆ ಯಾರು ಕರೆದುಕೊಂಡು ಬಂದು ದಾಖಲು ಮಾಡಿದರು ಎಂದು ಸಹ ನಮೂದಿಸುತ್ತಾರೆ ಎಂದರೆ ಸರಿ. ಆ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲು ತೊಂದರೆ ಇಲ್ಲ ಎಂದರೆ ಸಾಕ್ಷಿಯು ನನ್ನ ಅಣ್ಣನೇ ಮನೆಯ ಯಜಮಾನಿಕೆ

ಮಾಡುತ್ತಿದ್ದರಿಂದ ಆ ಬಗ್ಗೆ ದಾಖಲೆಗಳು ಅವರ ಬಳಿಯೇ ಇದ್ದು ನಮಗೆ ಸಿಕ್ಕಿಲ್ಲ ಎಂದು ನುಡಿಯುತ್ತಾರೆ. ನವೋದಯ ಆಸ್ಪತ್ರೆಗೆ ಕೇಳಿದರೆ ದಾಖಲೆ ಕೊಡುತ್ತಾರೆ ಎಂದರೆ ಸಾಕ್ಷಿಯು ಕೊಡಬಹುದು ಎಂದು ನುಡಿಯುತ್ತಾರೆ. ನಾನು ಈ ದಾವೆಗೋಸ್ಕರ ನನ್ನ ತಂದೆಯವರನ್ನು ನನ್ನ ಅಣ್ಣ ನವೋದಯ ಆಸ್ಪತ್ರೆಗೆ ಸೇರಿಸಿದ್ದರು ಎಂದು ಸೃಷ್ಟಿ ಮಾಡಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ವಿದ್ಯಾಭ್ಯಾಸಕ್ಕೆಂದು ಹೊರಗಡೆ ಹೋಗಿ 2001 ರವರೆಗೂ ಊರಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ನಾನು 1995 ರಿಂದ 2001 ರವರೆಗೆ ನಮ್ಮ ಊರಿನಲ್ಲಿ ಇದ್ದೆ ಎಂದು ತೋರಿಸಲು ನನ್ನ ಬಳಿ ಚುನಾವಣಾ ಗುರುತಿನ ಚೀಟಿ ಮತ್ತು ಪಡಿತರ ಚೀಟಿ ಇರುತ್ತದೆ. ಅವುಗಳನ್ನು ಹಾಜರುಪಡಿಸಲು ಅಗತ್ಯ ಇಲ್ಲದ ಕಾರಣ ನಾನು ಹಾಜರುಪಡಿಸಿಲ್ಲ. ನನ್ನ ತಂದೆಗೆ ಆರೋಗ್ಯದಲ್ಲಿ ಏರುಪೇರು ಆದ ಬಗ್ಗೆ ನಾನು, ನನ್ನ ಚಿಕ್ಕಮ್ಮನ ಮಗ ಮತ್ತು ನನ್ನ ಅಕ್ಕ 1995 ರಿಂದ ಆಸ್ಪತ್ರೆಯಲ್ಲಿ ಇದ್ದೆವು. 1995 ರಿಂದ ನಾವು ಆಸ್ಪತ್ರೆಯಲ್ಲಿ ನನ್ನ ತಂದೆಯ ಅನಾರೋಗ್ಯದ ಸಂಬಂಧ ಇದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮರಣ ಶಾಸನ ಖೊಟ್ಟಿ ಇರುತ್ತದೆ ಅದನ್ನು ರದ್ದುಪಡಿಸಿ ಎಂದು ಉಪನೋಂದಣಾಧಿಕಾರಿ ಇಲಾಖೆಗೆ ಅರ್ಜಿ ಕೊಟ್ಟಿಲ್ಲ.

ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು ವಿನಂತಿಯ ಮೇರೆಗೆ ಪಾಟೀ ಸವಾಲನ್ನು ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.